Indian Journal of History and Archaeology

ISSN (E):2582-225X
VOL-1 ISSUE 5, JAN-FEB, 2020, 06-19

# ದಲಿತ್ ಪ್ಯಾಂಥರ್ಸ್ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿಗಳ ತೌಲನಿಕ ವಿಶ್ಲೇಷಣೆ

ಡಾ. ಕೆ. ಗುರುಸ್ವಾಮಿ

**ಡಾ. ಕೆ. ಗುರುಸ್ವಾಮಿ**
**ಸಮಾಜ-ವಿಜ್ಞಾನ ಶಿಕ್ಷಕರು**
**ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ,**
**ಹೊಳೆನರಸೀಪುರ, ಹಾಸನ.**

ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲಿ ಭಾರತದಾದ್ಯಂತ ಹರಿಜನ ಸಮುದಾಯಗಳ ಬಲಾಢ್ಯ ಜಾತಿವಾದಿ ಮೇಲ್ವರ್ಗಗಳ ಅಡಿಯಲ್ಲಿನ ದಾಸ್ಯತನದ ಜೀವನ ಕಂಠಕಪ್ರಾಯವಾಗಿತ್ತು. ಬ್ರಾಹ್ಮಣಶಾಹಿಗಳ ಶ್ರೇಣೀಕೃತ ಜಾತಿವ್ಯವಸ್ಥೆಯಿಂದಾಗಿ ದಲಿತರ ಬದುಕುವ ಹಕ್ಕುಗಳೆಲ್ಲವನ್ನು ಬಲವಂತವಾಗಿ ಕಬಳಿಸಿಕೊಂಡು ಇವರ ಜೀವನವನ್ನು ಅಲ್ಲೋಲ ಕಲ್ಲೋಲವಾಗಿದ್ದವು.ಇಂತಹ ವಿಷಮ ಪರಿಸ್ಥಿತಿಯಲ್ಲಿ ದಲಿತವರ್ಗಗಳ ದಾಸ್ಯ ಸಂಕೋಲೆಯನ್ನು ಕತ್ತರಿಸುವ ಹರಿತವಾದ ಸಂಘಟನಾ ಶಕ್ತಿಯ ಖಡ್ಗವಾಗಿ ದೇಶದಾದ್ಯಂತ ಹಲವಾರು ದಲಿತಪರ ಸಂಘಟನೆಗಳು ಮೂರ್ತಗೊಂಡವು.ಅಂತಹ ಸಂಘಟನೆಗಳಲ್ಲಿ ಮಹಾರಾಷ್ಟ್ರದ ದಲಿತ್ ಪ್ಯಾಂಥರ್ಸ್ ಹಾಗೂ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಗಳು ಪ್ರಮುಖವಾದವುಗಳು. ಇವೆರಡೂ ಸಂಘಟನೆಗಳು 'ಒಂದೇ ನಾಣ್ಯದ ಎರಡು ಮುಖಗಳಂತೆ' ಕಾರ್ಯನಿರ್ವಹಿಸಿ ಬಾಯಿದ್ದರೂ ಸವರ್ಣೀಯರ ಅಮಾನವೀಯ ದೌರ್ಜನ್ಯಗಳನ್ನು ಪ್ರಶ್ನಿಸಲಾಗದೆ ಮೂಕವೇದನೆಯನ್ನು ಅನುಭವಿಸುತ್ತಾ ನರಕ ಸದೃಶ ಜೀವನವನ್ನು ನಡೆಸುತ್ತಿದ್ದ ಇವರಿಗೆ ಅನ್ಯಾಯವನ್ನು ಪ್ರಶ್ನಿಸಿ ಅದನ್ನು ತಮ್ಮ ಹೋರಾಟದ ಮೂಲಕ ಮೆಟ್ಟಿನಿಲ್ಲುವ ತಾಕತ್ತನ್ನು ತುಂಬಿದ ಧೀಶಕ್ತಿಗಳಾಗಿದ್ದವು. ಆದರೆ ಕ್ರಮೇಣ ಇವೆರಡೂ ಸಂಘಟನೆಗಳು ತಮ್ಮಗಳ ಆಂತರಿಕ ಬಿಕ್ಕಟ್ಟು, ಭಿನ್ನತೆ ಮತ್ತು ಭಿನ್ನಾಭಿಪ್ರಾಯಗಳಿಂದ ಒಡೆದ ಕನ್ನಡಿಯ ಚೂರುಗಳಂತೆ ಛಿದ್ರಛಿದ್ರಗೊಂಡಿರುವುದು ನಿಜಕ್ಕೂ ದುರಂತ.ಹೀಗಾಗಿ ಇವೆರಡೂ ಸಂಘಟನೆಗಳು ಹುಟ್ಟಿನಿಂದಿಡಿದು ಛಿದ್ರತೆವರೆಗೆ ಬಹಳ ಸಾಮೀಪ್ಯವಾದ ಹೋಲಿಕಾತ್ಮಕ ಸಂಬಂಧಗಳನ್ನು ಹೊಂದಿವೆ. ಆದುದರಿಂದ ಈ ಲೇಖನದಲ್ಲಿ

'ದಲಿತ್ ಪ್ಯಾಂಥರ್ಸ್ ಸಂಘಟನೆ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಕ.ದ.ಸಂ.ಸ.) ಗಳ ಸ್ಥಾಪನೆಯ ಐತಿಹಾಸಿಕ ಹಿನ್ನಲೆ', 'ಇವುಗಳ ಮೇಲೆ ಬ್ಲಾಕ್ ಪ್ಯಾಂಥರ್ಸ್ ಹಾಗೂ ಭೀಮಸೇನೆ ಸಂಘಟನೆಗಳ ಪ್ರಭಾವ', 'ಇವುಗಳ ನೇತೃತ್ವದಲ್ಲಿ ಸಾಂಸ್ಕೃತಿಕ ಚಳವಳಿಯಾದ ದಲಿತ ಚಳವಳಿ' ಮತ್ತು 'ದಲಿತ್ ಪ್ಯಾಂಥರ್ಸ್ ಹಾಗೂ ಕ.ದ.ಸಂ.ಸ.ಗಳ ಮೇಲೆ ಬೀಸಿದ ವಿಘಟನೆಯ ಬಿರುಗಾಳಿ' ಕುರಿತಾಗಿ ತಿಳಿಸಲು ಪ್ರಯತ್ನಿಸಿದ್ದೇನೆ

- **ದಲಿತ್ ಪ್ಯಾಂಥರ್ಸ್ ಸಂಘಟನೆ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಕ.ದ.ಸಂ.ಸ.) ಗಳ ಸ್ಥಾಪನೆಯ ಐತಿಹಾಸಿಕ ಹಿನ್ನಲೆ:**

ಭಾರತವು ಶ್ರೇಣೀಕೃತ ಜಾತಿವ್ಯವಸ್ಥೆಯ ತವರೂರು.ಇಲ್ಲಿ ಸಿಂದೂ ಬಯಲಿನ ನಾಗರಿಕತೆಯ ಜಾತಿರಹಿತ ಮಾನವೀಯ ಸಮಸಮಾಜದ ಜನಸಂಸ್ಕೃತಿ ಅಸ್ತಿತ್ವದಲ್ಲಿತ್ತು.ಆದರೆ ವೈದಿಕಶಾಹಿಗಳ ಅಟ್ಟಹಾಸದಿಂದ ಹರಪ್ಪ ಸಂಸ್ಕೃತಿ ಅಂತ್ಯವಾಗಿ ಜಾತಿಸಹಿತ ಅಸಮಾನತೆಯ ಸಮಾಜ ಬಲವಾಗಿ ಅಂಕುರಿಸಿತು.ಇವರು ಸಮಾಜವನ್ನು ಚಾತುರ್ವರ್ಣಾಧರಿತ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರವರ್ಗಗಳೆಂದು ವಿಭಾಗಿಸಿ, ಇವುಗಳಲ್ಲಿ 'ಬ್ರಾಹ್ಮಣ ವರ್ಗವೇ ಶ್ರೇಷ್ಠ' ಎಂದು ತಮ್ಮ ಸವರ್ಣೀಯತ್ವವನ್ನು ಪ್ರತಿಪಾದಿಸಿದರು.ಜೊತೆಗೆ ರಾಜಮಹಾರಾಜರುಗಳನ್ನು ತಮ್ಮ ತತ್ವಸಿದ್ಧಾಂತಗಳು, ಯಜ್ಞಯಾಗಾದಿಗಳು, ಮಂತ್ರ ಶ್ಲೋಕಗಳ' ಮೂಲಕ ಓಲೈಸಿಕೊಂಡು ಅವರುಗಳ ಆಸ್ಥಾನಗಳಲ್ಲಿ ಸಿಗುವ ಎಲ್ಲಾ ರೀತಿಯ ಉನ್ನತ ಅಧಿಕಾರದ ಪದವಿಗಳನ್ನು ಗಳಿಸಿಕೊಂಡರು. ಮಾತ್ರವಲ್ಲದೆ ತಮ್ಮ ಈ ರೀತಿಯ ಸ್ಥಾನಮಾನಗಳಿಗೆ ಸಮಾನವಾಗಿ ಯಾರೂ ಬಾರದಂತೆ ತಡೆಯುವ ತಂತ್ರಗಳನ್ನು ಎಣೆದು, ಅಸ್ಪೃಶ್ಯ ಸಮುದಾಯಗಳಿಂದ ಸಮಾಜದಲ್ಲಿ ಸ್ವತಂತ್ರವಾಗಿ ಬದುಕುವ ಹಕ್ಕನ್ನೇ ಕಿತ್ತುಕೊಂಡರು. 'ಜಾತೀಯತೆ'ಯ ಹೆಸರಿನಲ್ಲಿ ಸವರ್ಣೀಯರ ಈ ರೀತಿಯ ದುರಾಭ್ಯಾಸ ಮತ್ತು ದುರ್ವರ್ತನೆಗಳು ದೇಶದ ಮೂಲೆಮೂಲೆಗಳಿಗೂ ವ್ಯಾಪಿಸಿತ್ತು. ಕ್ರಮೇಣ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಕರುಗಳ ಸಮಾಜೋ-ಧಾರ್ಮಿಕ ಚಳವಳಿಯ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ತತ್ವಸಿದ್ಧಾಂತಗಳ ತಿರುಳನ್ನು ಅರಿತ ದಲಿತ್‌ಪ್ಯಾಂಥರ್ಸ್ ಹಾಗೂ ಕ.ದ.ಸಂ.ಸ.ಗಳು ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿ ಸಂಘಟನಾತ್ಮಕವಾಗಿವಿದೇಶಿ ಅಲ್ಪಸಂಖ್ಯಾತ ಜಾತಿವಾದಿ ಬ್ರಾಹ್ಮಣಶಾಹಿಗಳ ವಿರುದ್ಧ ಮಾತ್ರವಲ್ಲದೆ ಜಾತೀಯತೆಯ ಕ್ರೌರ್ಯಗಳನ್ನು ಮೈದುಂಬಿಕೊಂಡಿದ್ದ ಶೂದ್ರಜಾತಿಗಳ ಶೋಷಕರ ವಿರುದ್ಧವಾಗಿಯೂ ದಲಿತ ಚಳವಳಿಯನ್ನು ಪ್ರಾರಂಭಿಸಿದವು.

ಇದೇ ಸಮಯದಲ್ಲಿ ಇವೆರಡೂ ಸಂಘಟನೆಗಳ ಮುಂದಾಳುಗಳು ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ನಾರಾಯಣಗುರು, ಶಾಹುಮಹಾರಾಜ್, ಬಿ.ಆರ್.ಅಂಬೇಡ್ಕರ್, ರಾಮಮನೋಹರ ಲೋಹಿಯಾ ಹಾಗೂ ಜಯಪ್ರಕಾಶ್ ನಾರಾಯಣ್‌ರವರ ಸಮಾಜವಾದಿ ತತ್ವಾದರ್ಶಗಳ ಸಮಸಮಾಜದ

ನಿರ್ಮಾಣದ ಧ್ಯೇಯ, ಕಾರ್ಲ್‌ಮಾರ್ಕ್ಸ್‌ರವರ ಕಾರ್ಮಿಕರ ಪರವಾದ ಚಿಂತನೆ, ಕಾಳಜಿ ಮತ್ತು ಕಳಕಳಿಯುಕ್ತ ಆಶೋತ್ತರಗಳನ್ನು ಈಡೇರಿಸುವುದನ್ನೇತಮ್ಮಗಳ ಹೋರಾಟಗಳ ಗುರಿಯನ್ನಾಗಿಸಿಕೊಂಡು ಕಾರ್ಯನಿರ್ವಹಿಸುವತ್ತ ದಾಪುಗಾಲು ಹಾಕಿದರು.ಜೊತೆಗೆಇಂತಹ ಸಂದರ್ಭದಲ್ಲಿ ಇವೆರಡೂ ಸಂಘಟನೆಗಳ ಮೇಲೆ ಅನ್ಯಾಯ, ಅಸಮಾನತೆ, ಜನಾಂಗೀಯ ತಾರತಮ್ಯ, ವರ್ಣಬೇಧ ನೀತಿ ಹಾಗೂ ಅಸ್ಪೃಶ್ಯತಾಚರಣೆಗಳ ಹೋರಾಟಗಳ ಖನಿಯಾಗಿದ್ದ ಅಮೆರಿಕಾದ ಬ್ಲಾಕ್ ಪ್ಯಾಂಥರ್ಸ್ ಹಾಗೂ ಮಹಾರಾಷ್ಟ್ರದ ಭೀಮಸೇನೆ ಸಂಘಟನೆಗಳ ಪ್ರಭಾವ ಅತ್ಯಧಿಕವಾಗಿತ್ತು.

- **ಅಮೆರಿಕಾದ ಬ್ಲಾಕ್ ಪ್ಯಾಂಥರ್ಸ್ ಸಂಘಟನೆ:**

ಕಪ್ಪುವರ್ಣೀಯರ ಸಬಲೀಕರಣಕ್ಕಾಗಿ ಬೂಕರ್ ಟಿ. ವಾಷಿಂಗ್ಟನ್, ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, ರೇ, ಅಬರ್ನತಿ ಮುಂತಾದವರು ಗಾಂಧೀಜಿಯವರ ಅಹಿಂಸಾತ್ಮಕ ತತ್ವವನ್ನು ಹಾಗೂ ಪ್ರಜಾಪ್ರಭುತ್ವ ಮಾದರಿಯ ಪ್ರತಿಭಟನೆ ಮಾಡುತ್ತಿದ್ದರು.ಹಾಗೆಯೇ ಮಾರ್ಕಸ್ ಗಾರ್ವೆ, ಡ್ಯೂಬಿಯಸ್, ಹತ್ತನೇ ಮಾಲ್ಕಂ ಮುಂತಾದವರು ಹಿಂಸಾತ್ಮಕ ಹೋರಾಟಗಳ ತತ್ವ ಮತ್ತು ಚಿಂತನೆಗಳಿಂದ ಬಿಳಿಯರ ವಿರುದ್ಧ ಚಳವಳಿಯನ್ನು ಮಾಡುತ್ತಿದ್ದರು. ಇವರಿಬ್ಬರ ಹೋರಾಟಗಳಿಂದ ಪ್ರಭಾವಿತರಾದ ಹ್ಯೂ ಪರ್ಸಿ ನ್ಯೂಟನ್ ಹಾಗೂ ಬಾಬ್ಬಿ ಸೀಲೆ ಎಂಬ ಸುಶಿಕ್ಷಿತ ಕಪ್ಪುವರ್ಣೀಯ ಯುವ ವಿದ್ಯಾರ್ಥಿಗಳು 15 ಅಕ್ಟೋಬರ್, 1966ರಂದು ಅಮೇರಿಕಾದ ಕ್ಯಾಲಿಫೋರ್ನಿಯಾದ ಆಕ್ಲೆಂಡ್ ಎಂಬಲ್ಲಿ 'ಸ್ವರಕ್ಷಣೆಗಾಗಿ ಬ್ಲಾಕ್ ಪ್ಯಾಂಥರ್ ಪಾರ್ಟಿ' ಕ್ರಾಂತಿಕಾರಿ ಸಂಘಟನೆಯನ್ನು ಸ್ಥಾಪಿಸಿದರು.[1] ಈ ಸಂದರ್ಭದಲ್ಲಿ ಇವರ ಜೊತೆ ಎಲ್ಬರ್ಟ್ ಹೊವಾರ್ಡ್, ಶರ್ಮನ್ ಫೋರ್ಟೆ, ರೆಗ್ಗೀ ಫೋರ್ಟೆ, ಬಾಬ್ಬಿ ಹಟನ್ ಎಂಬ ಕಪ್ಪು ವಿದ್ಯಾರ್ಥಿ ನಾಯಕರು ಕೂಡ ಪ್ರಮುಖ ಪಾತ್ರ ವಹಿಸಿದ್ದರು.[2] ಎಡ್ರಿಡ್ಜ್ ಕ್ಲೆವರ್, ಹೆಚ್. ರಾಪ್ ಬ್ರೌನ್, ಸ್ಟೋಕ್ಲೇ ಕಾರ್ಮಿಚಲ್‌ರವರುಗಳು ಈ ಪಾರ್ಟಿಯ ಪ್ರಧಾನ ಮುಂದಾಳುಗಳಾಗಿದ್ದರು. ಇವರೆಲ್ಲರೂ ಕಾಲೇಜೋಂದರ 'ಅಹಿಂಸಾತ್ಮಕ ಸಹಕಾರ ವಿದ್ಯಾರ್ಥಿ ಸಮಿತಿ' (ಸ್ಟೂಡೆಂಟ್ ನಾನ್ ವೈಲೆಂಟ್ ಕೋ–ಆರ್ಡಿನೇಟಿಂಗ್ ಕಮಿಟಿ)ಯ ಪದಾಧಿಕಾರಿಗಳಾಗಿದ್ದರು.

ಇವರುಗಳು ಉತ್ತಮ ಬರಹಗಾರರು, ಕವಿಗಳು ಹಾಗೂ ಕಲಾವಿದರುಗಳಾಗಿದ್ದುಕೊಂಡು, ಪಾರ್ಟಿಯಲ್ಲಿ ಗೌರವಾನ್ವಿತ ಜವಾಬ್ದಾರಿಗಳನ್ನು ಹೊಂದಿದ್ದರು.ಸ್ಟೋಕ್ಲೇ ಕಾರ್ಮಿಚಲ್ ಪ್ರಧಾನ ಮಂತ್ರಿಯಾಗಿ, ಹ್ಯೂ.ಪರ್ಸಿ ನ್ಯೂಟನ್ ಪಾರ್ಟಿಯ ರಕ್ಷಣಾ ಮಂತ್ರಿಯಾಗಿ, ಎಡ್ರಿಡ್ಜ್ ಕ್ಲೆವರ್ ಮಾಹಿತಿ ಸಚಿವರಾಗಿ ಇನ್ನಿತರರು ಬೇರೆಬೇರೆ ಜವಾಬ್ದಾರಿಯುತ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು.ಪಾರ್ಟಿಯ ಚಿಹ್ನೆ 'ಕಪ್ಪು ಚಿರತೆಯ ಗುರುತು' ಆಗಿತ್ತು.ಹೀಗಾಗಿ ಕ್ರಾಂತಿಕಾರಿ ಬ್ಲಾಕ್ ಪ್ಯಾಂಥರ್ಸ್ ಸ್ಥಾಪಿತವಾದ ಮೂರು ವರ್ಷಗಳಲ್ಲೇ ಕಪ್ಪುಜನಾಂಗದ ಮೇಲೆ ಹೊಂದಿದ್ದ ಸಂವೇದನಾಯುಕ್ತ ಕಾಳಜಿ, ಕಳಕಳಿಯಿಂದಾಗಿ ಇದರ

ಪ್ರಸಿದ್ಧತೆ ಅಮೆರಿಕದಾದ್ಯಂತ ಹರಡಿತು.ಜೊತೆಗೆ ಇದರ ಶಾಖೆಗಳು ಕೂಡ ವಿಸ್ತಾರಗೊಂಡವು. ಉದಾಹರಣೆಗೆ ಅಮೆರಿಕಾದ ಬಾಲ್ಟಿಮೋರ್, ಚಿಕಾಗೋ, ಕ್ಲೆವೆಲ್ಯಾಂಡ್, ಲಾಸ್ಏಂಜಲೀಸ್, ಸ್ಯಾನ್‌ಡಿಯೊಗೋ, ಡೆನ್ವರ್, ಡೆಟ್ರಾಯ್ಟ್, ಕನ್ಸಾಸ್ ಸಿಟಿ, ಡಲ್ಲಾಸ್, ನ್ಯೂ ಒರಿಲನ್ಸ್, ನೆವರ್ಕ್, ನ್ಯೂಯಾರ್ಕ್, ಬೋಸ್ಟನ್, ಫಿಲಡೆಲ್ಫಿಯಾ, ಪಿಟ್ಸ್‌ಬರ್ಗ್, ಸಿಟಲ್, ಸ್ಯಾನ್ ಫ್ರಾನ್ಸಿಸ್ಕೋ, ವಾಷಿಂಗ್ಟನ್ ಡಿ.ಸಿ, ಆಫ್ರಿಕನ್ ದೇಶಗಳು ಹಾಗೂ ಮುಂತಾದ ಸ್ಥಳಗಳು ಪ್ರಮುಖವಾದವುಗಳು. ಮಾತ್ರವಲ್ಲದೆ ಈ ಪಾರ್ಟಿಯನ್ನು ಸೇರುವ ಸದಸ್ಯರ ಸಂಖ್ಯೆಯೂ ಕೂಡ ಗಣನೀಯವಾಗಿ ಏರಿಕೆಯಾಗಿ 10000 ಮಂದಿಗಿಂತ ಹೆಚ್ಚು ಸದಸ್ಯರನ್ನು ಹೊಂದಿತ್ತು.ಜೊತೆಗೆ ಇದು 'ದಿ ಬ್ಲಾಕ್ ಪ್ಯಾಂಥರ್' ಎಂಬ ವಾರ್ತಾ ಪತ್ರಿಕೆಯನ್ನು ಮುದ್ರಣ ಮಾಡುತ್ತಿದ್ದರಿಂದ ಇದನ್ನು ಬಹಳ ಕುತೂಹಲಕಾರಿಯಾಗಿ ಓದುವವರ ಸಂಖ್ಯೆಯೂ 2,50000 ಲಕ್ಷವನ್ನು ಮೀರಿತ್ತು.[3]

ಬ್ಲಾಕ್ ಪ್ಯಾಂಥರ್ಸ್ ಪಾರ್ಟಿಯ ವಿಶೇಷತೆ ಎಂದರೆ ಇದರ ಸದಸ್ಯರು, ಪದಾಧಿಕಾರಿಗಳ ಕ್ರಾಂತಿಕಾರತ್ವವನ್ನು ಸಂಕೇತಿಸುವ ಸಮವಸ್ತ್ರಗಳು.ನೀಲಿ ಅಂಗಿಗಳು, ಕಪ್ಪು ಷರಾಯಿ (ಪ್ಯಾಂಟ್), ಕಪ್ಪು ಚರ್ಮದ ಮೇಲಂಗಿ, ಕಪ್ಪು ನಡುಪಟ್ಟಿ ಹಾಗೂ ಸಣ್ಣ ಬಂದೂಕು ಇವುಗಳಲ್ಲಿ ಪ್ರಮುಖವಾದವುಗಳಾಗಿದ್ದವು. ಈ ಸಮವಸ್ತ್ರಗಳನ್ನು ಹ್ಯೂ ಪರ್ಸಿ ನ್ಯೂಟನ್‌ನ ಸಹೋದರ ಮೆಲ್ವಿನ್‌ನು ಪರಿಚಯಿಸಿದ್ದನು.[4] ಹೀಗಾಗಿ ಬ್ಲಾಕ್ ಪ್ಯಾಂಥರ್ಸ್‌ನ ಕ್ರಾಂತಿಕಾರಿ ಪಡೆಯ ಶಿಸ್ತು ಮತ್ತು ಆಕ್ರಮಣಕಾರಿ ನೀತಿಯನ್ನು ಕಂಡು ಯಾರು ಕೂಡ ಕಪ್ಪು ಜನರ ಮೇಲೆ ದೌರ್ಜನ್ಯವೆಸಗಲು ಪ್ರಯತ್ನಿಸುತ್ತಿರಲಿಲ್ಲ. ಜೊತೆಗೆ ಪಾರ್ಟಿಯು ತನ್ನ ಹೋರಾಟದ ಕ್ಷಿಪಣಿಗಳನ್ನಾಗಿ 'ಸ್ಟೂಡೆಂಟ್ ನಾನ್ ವೈಲೆಂಟ್ ಕೋ–ಆರ್ಡಿನೇಟಿಂಗ್ ಕಮಿಟಿ' (ಎಸ್.ಎನ್.ಸಿ.ಸಿ.) ಎಂಬ ವಿದ್ಯಾರ್ಥಿ ಸಂಘಟನೆಯನ್ನು ಸ್ಥಾಪಿಸಿಕೊಂಡಿತ್ತು.[5]

ಈ ಸಂದರ್ಭದಲ್ಲಿ ಬ್ಲಾಕ್ ಪ್ಯಾಂಥರ್ಸ್ ತನ್ನ ಪ್ರಣಾಳಿಕೆಯಲ್ಲಿ 'ಹತ್ತು ಅಂಶಗಳ ಕಾರ್ಯಕ್ರಮ'ಗಳನ್ನು ತಮ್ಮ ಬೇಡಿಕೆಗಳ ರೂಪದಲ್ಲಿ ಸರ್ಕಾರದ ಮುಂದಿಟ್ಟು ಅವುಗಳನ್ನು ಕಾರ್ಯರೂಪಕ್ಕೆ ತರಲು ಹೋರಾಟಗಳನ್ನು ಆರಂಭಿಸಿತು.

- **ಬ್ಲಾಕ್ ಪ್ಯಾಂಥರ್ಸ್ ಸಂಘಟನೆಯ ಹತ್ತು ಅಂಶಗಳ ಕಾರ್ಯಕ್ರಮಗಳು(ಬೇಡಿಕೆಗಳು)**:

ಸುಮಾರು 1966ರಿಂದ1982ರವರೆಗೂ ಪ್ರಬಲವಾಗಿ ಅಸ್ತಿತ್ವದಲ್ಲಿದ್ದ ಬ್ಲಾಕ್ ಪ್ಯಾಂಥರ್ಸ್ ಸಂಘಟನೆಯು 20ನೇ ಶತಮಾನದ ಮಧ್ಯಭಾಗದವರೆಗೂ ಕಪ್ಪುವರ್ಣೀಯರ ಮೇಲೆ ಬಿಳಿಯ ಸಮುದಾಯಗಳು ಮಾಡುತ್ತಿದ್ದ ಭೀಬತ್ಸ ಕೃತ್ಯಗಳಿಗೆ ಮೂಗುದಾರ ಹಾಕಲು ಸಿದ್ಧತೆಯನ್ನು ಮಾಡಿಕೊಂಡಿತು.ದಿನನಿತ್ಯ ಶೋಷಣೆಗೊಳಗಾಗುತ್ತಿದ್ದ ಕಪ್ಪುಜನರನ್ನು ಇಂತಹ ದುಸ್ಥಿತಿಗಳಿಂದ

ಮುಕ್ತಗೊಳಸುವ ಸಲುವಾಗಿ ಪಾರ್ಟಿಯ ಪ್ರಣಾಳಿಕೆಯ 10 ಅಂಶಗಳ ಕಾರ್ಯಕ್ರಮವನ್ನು ಬಿಡುಗಡೆಗೊಳಿಸಿ ತನ್ನ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಒತ್ತಾಯಿಸಿತು. ಆ ಬೇಡಿಕೆಗಳೆಂದರೆ,

1. ಕಪ್ಪುವರ್ಣೀಯರಿಗೆ ಬಿಳಿಯರಂತೆ ಸ್ವಾತಂತ್ರ್ಯ ಮತ್ತು ಸಮಾನತೆ ಅಧಿಕಾರವನ್ನು ನೀಡುವುದು.
2. ಜೀವನವನ್ನು ಸ್ವತಂತ್ರವಾಗಿ ಸ್ವಾಭಿಮಾನದಿಂದ ನಿರ್ವಹಿಸಲು ಖಾಯಂ ಉದ್ಯೋಗಗಳನ್ನು ನೀಡುವುದು.
3. ಪ್ರತಿಯೊಂದು ಕಪ್ಪುಜನರ ಕುಟುಂಬಕ್ಕೂ 40 ಎಕರೆ ಕೃಷಿ ಭೂಮಿಯನ್ನು ನೀಡಿ, ಗುಲಾಮಗಿರಿ, ಜೀತಪದ್ಧತಿಯನ್ನು ನಿರ್ಮೂಲನೆ ಮಾಡುವುದು.
4. ಕಪ್ಪುಜನರಿಗೆ ಜೀವಿಸಲು ಉತ್ತಮವಾದ ಸ್ವಂತ ನಿವೇಶನಗಳನ್ನು ಕಲ್ಪಿಸಿಕೊಡುವುದು.
5. ಉತ್ತಮ ಗುಣಮಟ್ಟದ ಶಿಕ್ಷಣ ಸೌಲಭ್ಯವನ್ನು ಒದಗಿಸಿ, ತಮ್ಮಗಳ ಸತ್ಯಘಟನೆಗಳ ಇತಿಹಾಸವನ್ನು ತಿಳಿಸಲು ಅನುಕೂಲ ಮಾಡಿಕೊಡುವುದು.
6. ಆಧುನಿಕ ವೈದ್ಯಕೀಯ ಸೇವೆಗಳನ್ನು ಒದಗಿಸುವುದರ ಮೂಲಕ ಕಪ್ಪುವರ್ಣೀಯರಿಗೆ ಉಚಿತ ಆರೋಗ್ಯ ತಪಾಸಣಾ ಸೌಕರ್ಯಗಳನ್ನು ಒದಗಿಸುವುದು.
7. ಕಪ್ಪುಜನರ ಮೇಲೆ ದ್ವೇಷ, ವೈಷಮ್ಯದಿಂದ ಕೂಡಿದ ಪೋಲೀಸ್ ದೌರ್ಜನ್ಯ, ಕೊಲೆ, ಸುಲಿಗೆಗಳನ್ನು ನಿಲ್ಲಿಸುವುದು.
8. ಎಲ್ಲಾ ರೀತಿಯ ಯುದ್ಧಗಳನ್ನು ನಿಲ್ಲಿಸಿ, ಕಪ್ಪುಜನಾಂಗಗಳಿಗೆ ಆತ್ಮರಕ್ಷಣೆಗಾಗಿ ಸರ್ಕಾರ ಶಸ್ತ್ರಾಸ್ತ್ರಗಳನ್ನು ನೀಡಬೇಕು.
9. ಎಲ್ಲಾ ರಾಜಕೀಯ ಖೈದಿಗಳಿಗೆ ನಗರ, ಪ್ರಾಂತೀಯ, ರಾಜ್ಯಗಳ ಸೆರಮನೆ ವಾಸದಿಂದ ಬಿಡುಗಡೆಗೊಳಿಸುವುದು. ಅಲ್ಲದೆ ನ್ಯಾಯಾಧೀಶ ಸ್ಥಾನಕ್ಕೆ ಕಪ್ಪುವರ್ಣೀಯರಿಗೂ ಅವಕಾಶವನ್ನು ನೀಡುವುದು.
10. ಉತ್ತಮವಾದ ದೈಹಿಕ ದೃಢತೆಯನ್ನು ಬಹುಕಾಲಗಳಿಂದಲೂ ಹೊಂದುತ್ತಾ ಬಂದಿರುವ ಕಪ್ಪುಜನಗಳನ್ನು ಸರ್ಕಾರದ ಮಿಲಿಟರಿ ಹುದ್ದೆಗಳಿಗೆ ಸೇರಿಸಿಕೊಳ್ಳಬೇಕು.

ಮುಂತಾದವುಗಳು ಪ್ರಮುಖವಾದವುಗಳಾಗಿದ್ದವು.[6] ಇವುಗಳನ್ನು ಜಾರಿಗೊಳಿಸುವಂತೆ ಮಾಡಲು ತನ್ನದೇ ಆದ ಹೋರಾಟ ಶೈಲಿಯನ್ನು ಕಂಡುಕೊಂಡಿತ್ತು. ಇದರ

- **ಬಿ. ಶ್ಯಾಮಸುಂದರ್‌ರವರ ಭೀಮಸೇನೆ:**

ಭೀಮಸೇನೆ ಸಂಘಟನೆಯನ್ನು ಬಿ.ಶ್ಯಾಮಸುಂದರ್ ಎಂಬುವರು ಬಿ.ಎಸ್.ವೆಂಕಟರಾವ್ ಎಂಬ ದಲಿತೇತರ ವ್ಯಕ್ತಿಯ ಸಹಯೋಗದಿಂದ ಔರಂಗಾಬಾದ್ (ಈಗಿನ ಗುಲ್ಬರ್ಗಾ ಜಿಲ್ಲೆ) ನಲ್ಲಿ ಸ್ಥಾಪಿಸಿದರು.[7]

ಈ ಸಂಘಟನೆಯ ಸ್ಥಾಪನೆಯ ಹಿಂದೆ ಬ್ಲಾಕ್ ಪ್ಯಾಂಥರ್ಸ್‌ನ ಜೊತೆಗೆ ಜ್ಯೋತಿ ಬಾಫುಲೆ, ಡಾ.ಬಿ.ಆರ್.ಅಂಬೇಡ್ಕರ್‌ರವರ ದಲಿತಪರ ತತ್ವ, ಚಿಂತನೆಗಳ ಪ್ರಭಾವ ಇರುವುದು ನಿಸ್ಸಂದೇಹ.ಜೊತೆಗೆಸಂಘಟನೆಯನ್ನು ಬಿ.ಶ್ಯಾಮಸುಂದರ್‌ರವರು ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶಗಳಲ್ಲಿನ ದಲಿತರ ಸ್ಥಿತಿಗತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು 29ಏಪ್ರಿಲ್, 1968ರಲ್ಲಿ ಅಂಬೇಡ್ಕರ್‌ರವರ 77ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಸ್ಥಾಪಿಸಿದರು.[8] ಈ ಸಂಘಟನೆ 'ನೀಲಿ ಬಣ್ಣದ ಬಾವುಟ', ಮಧ್ಯದಲ್ಲಿ 'ಸೂರ್ಯನ ಚಿಹ್ನೆ', ಅದರ 'ಅಕ್ಕಪಕ್ಕ ನೇಗಿಲು', 'ಸುತ್ತಿಗೆ', 'ಬಾಣ'ಗಳನ್ನು ತನ್ನ ಲಾಂಛನವನ್ನಾಗಿ ಮಾಡಿಕೊಂಡಿತ್ತು.ಇದರಲ್ಲಿನ ಗುರುತುಗಳು ಮೂಲನಿವಾಸಿಗಳ ಸಂಸ್ಕೃತಿಯನ್ನು ಬಿಂಬಿಸುತ್ತಿದ್ದವು.

ಭೀಮಸೇನೆ ಸಂಘಟನೆಯು ತನ್ನದೇ ಆದ ಸಂವಿಧಾನವನ್ನು ಹೊಂದಿದ್ದು ಪ್ಯಾಂಥರ್ಸ್‌ನಂತೆ ಲಕ್ಷಾಂತರ ಕಾರ್ಯಕರ್ತರ ಸದಸ್ಯತ್ವವನ್ನು ಹೊಂದಿತ್ತು. ಅಲ್ಲದೆ ಕೈಯಲ್ಲೊಂದು ಲಾಠಿ, ಕಾಲಲ್ಲಿ ದಪ್ಪ ಚಪ್ಪಲಿ, ಪೌರುಷವನ್ನು ಸೂಚಿಸುವ ದಪ್ಪ ಮೀಸೆ ಬಿಡುವುದು ಇದರ ಸಮವಸ್ತ್ರದ ಲಕ್ಷಣಗಳಾಗಿದ್ದವು.[9] ಬಿ.ಶ್ಯಾಮಸುಂದರ್‌ರವರು ಇಲ್ಲಿನ ದಲಿತರಿಗೆ ಜ್ಞಾನದ ಬಂಗಾರದ ಕೀಲಿಕೈ ಆದ ಶಿಕ್ಷಣವನ್ನು ನೀಡಿ ಅವರಲ್ಲಿ ಸವರ್ಣೀಯರ ಅನ್ಯಾಯಗಳನ್ನು ಪ್ರಶ್ನಿಸಿ ಹೋರಾಡುವ ಆತ್ಮಸ್ಥೈರ್ಯವನ್ನು ಬೆಳೆಸಲು ಪ್ರಯತ್ನಿಸಿದರು. ಇದಕ್ಕಾಗಿ ಹೈದರಾಬಾದ್ ಸಂಸ್ಥಾನದಲ್ಲಿ ದಲಿತರಿಗೋಸ್ಕರ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು.ಇವುಗಳ ಮೂಲಕ ದಲಿತರಲ್ಲಿ ಜಾಗೃತಿ ಹಿಮ್ಮಡಿಗೊಳ್ಳುವಂತೆ ಮಾಡಿ ಸವರ್ಣೀಯರ ವಿರುದ್ಧ ದಂಗೆ ಏಳಲು ಪ್ರೇರೇಪಿಸಿದರು. ಆ ಸಮಯದಲ್ಲಿ ಈ ಸಂಘಟನೆಯ ಸದಸ್ಯರಾಗಿ ಭಾರತ ಸರ್ಕಾರದಲ್ಲಿ ಕೇಂದ್ರ ಕಾರ್ಮಿಕ ಸಚಿವರಾಗಿ ಸೇವೆ ಸಲ್ಲಿಸಿದ್ದ ಮಲ್ಲಿಕಾರ್ಜುನ ಖರ್ಗೆ (2011), ಸಂಸದರಾಗಿದ್ದ ಧರ್ಮಸಿಂಗ್, ರಾಜಕಾರಣಿಗಳಾದ ಜಿ.ರಾಮಕೃಷ್ಣ, ಕೆ.ಬಿ.ಶಾಣಪ್ಪ, ಎಂ.ಎಲ್.ಸಿ.ಮಾರುತಿರಾವ್ ಡಿ ಮಾಲೆ ಮುಂತಾದವರು ದುಡಿದಿದ್ದಾರೆ.ಇವರ ಸಂಘಟನಾತ್ಮಕ ಹೋರಾಟದಿಂದ ಬಿ.ಶ್ಯಾಮಸುಂದರ್‌ರವರು ಬ್ಲಾಕ್ ಪ್ಯಾಂಥರ್ಸ್‌ನಂತೆ ಸರ್ಕಾರದ ಮುಂದೆ ದಲಿತರ ಪರವಾಗಿ ಪ್ರಮುಖ ನಾಲ್ಕು ಬೇಡಿಕೆಗಳನ್ನು ಈಡೇರಿಸಲು ಮನವಿ ಸಲ್ಲಿಸಿದರು. ಅವುಗಳೆಂದರೆ.

1. ಪ್ರತಿ ತಾಲ್ಲೂಕಿನ 25 ಹಳ್ಳಿಗಳನ್ನು ದಲಿತರಿಗೆ ಬಿಟ್ಟುಕೊಡುವುದು.
2. ದಲಿತರಿಗೋಸ್ಕರ ಪ್ರತ್ಯೇಕ ಚುನಾವಣೆ ವ್ಯವಸ್ಥೆಯನ್ನು ಜಾರಿಗೊಳಿಸುವುದು.
3. ಪ್ರತಿ ರಾಜ್ಯದಲ್ಲೂ ದಲಿತರಿಗೆ ಪ್ರತ್ಯೇಕ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದು.
4. ದಲಿತರಿಗೆ ಪ್ರಬಲ ರಾಜಕೀಯ ವ್ಯವಸ್ಥೆಯನ್ನು ಜಾರಿಗೊಳಿಸುವುದು.

ಪ್ರಮುಖವಾದವುಗಳಾಗಿದ್ದವು.[10]ಇವುಗಳನ್ನು ಸರ್ಕಾರದ ಮೂಲಕ ಜಾರಿಗೊಳಸಲು ಬಿ.ಶ್ಯಾಮಸುಂದರ್‌ರವರು ತಮ್ಮ ಸಂಘಟನೆಯ ಪದಾಧಿಕಾರಿಗಳು, ಕಾರ್ಯಕರ್ತರ ನೆರವಿನೊಂದಿಗೆ ಹೋರಾಟ ನಡೆಸಿ ದಲಿತರ ಅಂಗರಕ್ಷಕರಾಗಿ ಗುರುತಿಸಿಕೊಂಡಿದ್ದರು.

ಹೀಗೆ ಇವೆರಡು ಸಂಘಟನೆಗಳ ಹೋರಾಟಗಳ ಮಾದರಿ ಮಹಾರಾಷ್ಟ್ರ ಹಾಗೂ ಕರ್ನಾಟಕದ ದಲಿತ ಸಮುದಾಯದ ಬುದ್ಧಿಜೀವಿಗಳ ಮೇಲೆ ಬೀರಿದ ಪರಿಣಾಮದಿಂದಾಗಿ ಇವೆರಡು ಸಂಘಟನೆಗಳ ಮುಂದಾಳುಗಳು ಕವಿಗಳಾಗಿ ಮತ್ತು ಕಲಿಗಳಾಗಿ ಜಾತಿವ್ಯವಸ್ಥೆಯ ವಿರುದ್ಧ ಹೋರಾಟ, ಪ್ರತಿಭಟನೆ, ಚಳವಳ ಮಾಡುವುದರ ಮೂಲಕ ಇದಕ್ಕೆ ಸಾಂಸ್ಥಿಕ ಸ್ವರ್ಶ ನೀಡಿದರು.ಆ ಸಂಘಟನೆಗಳೇ ಮಹಾರಾಷ್ಟ್ರದ 'ದಲಿತ್ ಪ್ಯಾಂಥರ್ಸ್' ಹಾಗೂ 'ಕರ್ನಾಟಕದ ದಲಿತ ಸಂಘರ್ಷ ಸಮಿತಿ (ಕ.ದ.ಸಂ.ಸ.)'.

- **ದಲಿತ್ ಪ್ಯಾಂಥರ್ಸ್ ಹಾಗೂ ಕ.ದ.ಸಂ.ಸ.ದ ನೇತೃತ್ವದಲ್ಲಿ ಸಾಂಸ್ಕೃತಿಕ ಚಳವಳಿಯಾದ ದಲಿತ ಚಳವಳ:**

ಮಹಾರಾಷ್ಟ್ರದಲ್ಲಿ 'ದಲಿತ್ ಪ್ಯಾಂಥರ್ಸ್ ಸಂಘಟನೆ' ಜುಲೈ, 1972ರಲ್ಲಿ ಸ್ಥಾಪನೆಯಾಯಿತು.[11] ಏಕೆಂದರೆ 1960ರ ನಂತರ ಮಹಾರಾಷ್ಟ್ರದಲ್ಲಿ ಜ್ಯೋತಿ ಬಾಫುಲೆ, ಡಾ.ಬಿ.ಆರ್. ಅಂಬೇಡ್ಕರ್‌ರವರ ದಲಿತಸಂವೇದನಾ ವಿಚಾರಧಾರೆಗಳು ಅಲ್ಲಿನ ದಲಿತ ವಿದ್ಯಾವಂತರಲ್ಲಿ ನೈತಿಕ ಶಕ್ತಿಯನ್ನು ತುಂಬಿದ್ದರಿಂದ 'ದಲಿತ ಸಾಹಿತ್ಯ'ವೆಂಬುದು ರಚನೆಯಾಗಲು ಪ್ರಾರಂಭವಾಗಿತ್ತು.ಇದರಿಂದಾಗಿ ಅಣ್ಣಾಭಾವು ಸಾಠೆ ಹಾಗೂ ಶಂಕರ್‌ರಾವ್ ಖರಾತ್ ಎಂಬುವವರು 'ಪ್ರಥಮ ಮಹಾರಾಷ್ಟ್ರ ದಲಿತ ಸಾಹಿತಿ'ಗಳಾಗಿ ಮರಾಠಿಗರಲ್ಲಿ ಬ್ಲಾಕ್ ಪ್ಯಾಂಥರ್ಸ್‌ನ ಕಪ್ಪುಪ್ರಜ್ಞೆಯಂತೆ ದಲಿತಪ್ರಜ್ಞೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.[12] ಇದರಿಂದಾಗಿ ಪ್ರಭಾವಿತರಾದ ಹಲವಾರು ಮಂದಿ ದಲಿತ ಲೇಖಕರು ಮತ್ತು ಕಲಾವಿದರುಗಳು ಅನಕ್ಷರಸ್ಥ ದಲಿತರಲ್ಲಿ ಸವರ್ಣೀಯರ ದೌರ್ಜನ್ಯಗಳನ್ನು ಎದುರಿಸುವ ಪ್ರಜ್ಞೆಯನ್ನು ಬೆಳೆಸಲು ಕವಿಗಳಾಗಿ, ಕಲಿಗಳಾಗಿ ಮತ್ತು ಕಲಾವಿದರಾಗಿ ಶ್ರಮಿಸಿದರು. ಅಂತಹವರಲ್ಲಿ ಸಾಹಿತಿ ನಾಮದೇವ ಢಸಾಳ, ರಾಜಾಢಾಲೆ, ಜೆ.ವಿ. ಪವಾರ್, ಅರ್ಜುನ ಡಾಂಗಳೆ, ಗಿರ್ಕಾರ್, ಚಂದ್ವಾಂಕರ್, ರಾಮದಾಸ್ ಸೊಟೆನ್, ಥೋರಟ್, ಅರ್ಜುನ ಕಸಬೆ, ಶಂಕರರಾವ್ ಖರಾತ್ ಮುಂತಾದವರು ಪ್ರಮುಖರು.

ಇವರುಗಳು 09 ಜುಲೈ, 1972ರಲ್ಲಿ ಬಾಂಬೆಯ ಸಿದ್ಧಾರ್ಥನಗರದಲ್ಲಿ ಸಭೆ ಸೇರಿ 'ದಲಿತ್ ಪ್ಯಾಂಥರ್ಸ್' ಎಂಬ ಕ್ರಾಂತಿಕಾರಕ ಸಂಘಟನೆಯನ್ನು ಸ್ಥಾಪಿಸುವುದರ ಮೂಲಕ ಶೋಷಿತ ದಲಿತರ ಬಾಳನಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳನ್ನು ದಿವ್ಯಸಿಂಚನವನ್ನಾಗಿ ಚಿಮ್ಮಿಸಲು ಕಾರ್ಯಪ್ರೌವೃತ್ತರಾದರು.ಈ ಸಂಘಟನೆಗೆ ರಾಮಮನೋಹರ ಲೋಹಿಯಾರವರ 'ಸಮಾಜವಾದಿ ಸಿದ್ಧಾಂತ'ಗಳ ಪ್ರಭಾವದಿಂದ ದೇಶದಾದ್ಯಂತ ಸ್ಥಾಪನೆಯಾಗಿದ್ದ 'ಸಮಾಜವಾದಿ ಯುವಸಭಾ', 'ಯುವಕ ಅಘಡಿ', 'ಯುವಕ ಕ್ರಾಂತಿ ದಳ' ಎಂಬ ವಿದ್ಯಾರ್ಥಿ ಸಂಘಟನೆಗಳ ಬೆಂಬಲವಿತ್ತು.ಇದರಿಂದಾಗಿಯೇ

ಸಮಾಜವಾದಿ ಯುವಜನ ಸಭಾದಲ್ಲಿದ್ದ ಈ ನಾಯಕರುಗಳಿಗೆ ಈ ದಲಿತ ಪ್ಯಾಂಥರ್ಸ್ ಸಂಘಟನೆಯನ್ನು ಸ್ಥಾಪಿಸಲು ಸಾಧ್ಯವಾಯಿತು.ಇದರ ಮೂಲಕ ತಮ್ಮ ಹೋರಾಟಗಳಲ್ಲಿ ಸವರ್ಣೀಯರನ್ನು ವಿರೋಧಿಸುವ ಕರಪತ್ರಗಳು, ಘೋಷಣೆಗಳು, ಗೋಡೆಬರಹಗಳು, ಹೋರಾಟದ ಹಾಡುಗಳು, ಕ್ರಾಂತಿಗೀತೆಗಳು, ಕಾಲ್ನಡಿಗೆ ಜಾಥಾ, ಪಂಜು ಮೆರವಣಿಗೆ, ಧರಣಿ, ಸತ್ಯಾಗ್ರಹ, ಪಿಕೆಟಿಂಗ್, ಬಂದ್, ಮುಷ್ಕರ, ಗೆರಾವ್ ಮುಂತಾದ ಹೋರಾಟದ ವಿಧಾನಗಳನ್ನು ಬಳಸಬೇಕೆಂದು ನಿರ್ಧರಿಸಿ ಕ್ರಿಯಾಶೀಲರಾದರು.

ದಲಿತ್ ಪ್ಯಾಂಥರ್ಸ್ ಸಂಘಟನೆಯ ದಲಿತಪರ ಕಾಳಜಿಯ ಹೋರಾಟದ ಅಲೆಯಿಂದಲೇ ಇದರ ಶಾಖೆಗಳು 1972ರಿಂದ1974ರ ಅವಧಿಯ ವೇಳೆಗೆ ನಾಸಿಕ್, ದೇವ್ಲಲಿ, ಪರಲಿ, ಕಲಮ್, ಲಾತೂರ್, ನಾಂದೇಡ್, ಬೀಡ್, ಪುಣೆ, ಬೆಳಗಾಂ, ನಿಪ್ಪಾಣಿ, ಸಾಂಗ್ಲಿ, ಸತಾರ, ಸೋಲಾಪುರ, ಜಲ್ಗಾವ್, ಚಾಲ್ಲಿಸ್‌ಗಾವ್, ಬೂಸ್ವಾಲ್, ಬಲ್ದಾನ, ಔರಂಗಬಾದ್, ಡುಲಿ, ಡಿಗ್ರಾನ್, ಪುಸಾದ್, ಪಾಲಗಾವ್, ವಾರ್ಧಾ, ಅಂಕೋಲ, ನಾಗ್ಪುರ, ಕಟೋಲ್, ಕಮಟಿ, ಸವ್ನರ, ಚಂದ್ರಪುರ, ಯವತ್ಮಲ್, ಭಂದ್ರಾ, ಬಲ್ಲಾಪುರ, ಅಹಮದಾಬಾದ್, ದೆಹಲಿ, ಬಿಂದ್ವಾಡ, ಭೂಪಾಲ್ ಮತ್ತು ಹಿಂಗಾನ್‌ಘಟ್ಟ ಮುಂತಾದ ಸ್ಥಳಗಳಲ್ಲಿ ಪ್ರಾರಂಭವಾದವು. ಅಲ್ಲದೆ ಲಂಡನ್‌ನಲ್ಲೂ ಗಾಮರೆ ನೇತೃತ್ವದಲ್ಲಿ ದಲಿತ್ ಪ್ಯಾಂಥರ್ಸ್ ಸಂಘಟನೆಯ ಶಾಖೆ ಪ್ರಾರಂಭವಾಯಿತು.[13]ಈ ಸಂಘಟನೆ ತನ್ನ ಪ್ರಣಾಳಿಕೆಯನ್ನು ಜಾರಿಗೆ ತರಲು ಸಮಿತಿಗಳನ್ನು ರಚಿಸಿಕೊಂಡು ಪದಾಧಿಕಾರಿಗಳು, ಕಾರ್ಯಕರ್ತರ ನೆರವಿನಿಂದ ಚುನಾವಣೆಯನ್ನು ಬಹಿಷ್ಕರಿಸುವ, ದಲಿತರ ಮೇಲೆ ಸವರ್ಣೀಯರ ದೌರ್ಜನ್ಯಗಳ ವಿರುದ್ಧ ಹೋರಾಡುವ, ಭೂಮಾಲೀಕರು, ಜಮೀನ್ದಾರರು, ಬಂಡವಾಳಶಾಹಿಗಳು ಹಾಗೂ ಸರ್ಕಾರದಿಂದ ದಲಿತರಿಗಾಗುತ್ತಿದ್ದ ಭೂ ವಂಚನೆಗಳನ್ನು ಚಳವಳಿಯ ಮೂಲಕ ತಡೆಯುವ ಕಾರ್ಯಾಚರಣೆಗಳಲ್ಲಿ ಮಗ್ನವಾಯಿತು.ಇದರ ಮನುವಾದಿ ಧೋರಣೆಗಳ ವಿರುದ್ಧದ ಹೋರಾಟದ ದಿವ್ಯ ತೇಜಸ್ಸಿನ ಛಾಯೆ 'ಕರ್ನಾಟಕ ದಲಿತ ಸಂಘರ್ಷ ಸಮಿತಿ'ಯ ಮೇಲೂ ಕಾಂತಿಯುತ ಬೆಳಕನ್ನು ನೀಡಿತು.ಇದರಿಂದಾಗಿ ಕ.ದ.ಸಂ.ಸ. ಶೋಷಿತ ಸಮುದಾಯಗಳ ಜಾತೀಯತೆಯ ನರಕಯಾತನೆಗೆ ದಿವ್ಯೌಷಧವಾಗಿ ಕರ್ನಾಟಕದಲ್ಲಿ ಸ್ಥಾಪನೆಯಾಯಿತು.

ಮೈಸೂರಿನಲ್ಲಿ ಘಟಿಸಿದ ಕರ್ನಾಟಕ ಸರ್ಕಾರದ ಮಾಜಿ ಪೌರಾಡಳಿತ ಸಚಿವರಾಗಿದ್ದ ಬಿ.ಬಸವಲಿಂಗಪ್ಪರವರ 'ಬೂಸಾ ಪ್ರಕರಣ' (1973) ದ ಹಿನ್ನಲೆಯಲ್ಲಿ ರಚನೆಯಾಗಿ ರಾಜ್ಯದ ಏಕೀಕೃತ ದಲಿತ ಸಂಘಟನೆಯೊಂದರ ಅಸ್ತಿತ್ವಕ್ಕಾಗಿ ದಿನಗಣನೆ ಮಾಡುತ್ತಿದ್ದ 'ಕರ್ನಾಟಕ ದಲಿತ ಬರಹಗಾರ ಮತ್ತು ಕಲಾವಿದ'ರ ಒಕ್ಕೂಟ'ದ ಚಿಂತಕರು ಹಾಗೂ ರಾಜ್ಯದ ಇನ್ನಿತರ ದಲಿತ ಸಂಘಟನೆಗಳ ನಾಯಕರುಗಳು 1978ರಲ್ಲಿ ಚಿಕ್ಕಮಗಳೂರಿನಲ್ಲಿ ಒಂದಾಗಿ ಶಿವಮೊಗ್ಗದ ಭದ್ರಾವತಿಯಲ್ಲಿ ಬಿ.ಕೃಷ್ಣಪ್ಪ ಹಾಗೂ ಪ್ರಮುಖ ಸಹಪಾಠಗಳಿಂದ ಸ್ಥಾಪಿತ ದ.ಸಂ.ಸ.ವನ್ನು ತಮ್ಮ ರಾಜ್ಯ ಸಂಘಟನೆಯಾಗಿ ಒಪ್ಪಿಕೊಂಡರು. ಹೀಗಾಗಿ

ದ.ಸಂ.ಸ.ವು 'ಕರ್ನಾಟಕ ದಲಿತ ಸಂಘರ್ಷ ಸಮಿತಿ' (ಕ.ದ.ಸಂ.ಸ) ಎಂಬ ಹೆಸರಿನಿಂದ ನಾಮಾಂಕಿತಗೊಂಡು ಅಮೆರಿಕಾದ ಬ್ಲಾಕ್ ಪ್ಯಾಂಥರ್ಸ್ ಹಾಗೂ ಮಹಾರಾಷ್ಟ್ರದ ದಲಿತ್ ಪ್ಯಾಂಥರ್ಸ್‌ಗಳ ಮಾದರಿಯಲ್ಲಿ ರಾಜ್ಯದಾದ್ಯಂತ ಶೋಷಣೆಗಳ ವಿರುದ್ಧ ಬಾಯಿದ್ದರೂ ಪ್ರಶ್ನಿಸುವ ಧೈರ್ಯವಿಲ್ಲದೆ ಮೂಕವೇದನೆಯನ್ನು ಅನುಭವಿಸುತ್ತಿದ್ದ ದಲಿತರ ಜೀವನಾಡಿಯಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು.[14] ಇದರ ಸ್ಥಾಪನೆಯ ಹಿಂದೆ ಬಿ. ಕೃಷ್ಣಪ್ಪರವರ ಒಡನಾಡಿಗಳಾಗಿ ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಹೆಚ್. ಗೋವಿಂದಯ್ಯ, ಶಿವಾಜಿ ಗಣೇಶನ್, ರಾಮದೇವ ರಾಕೆ ಮುಂತಾದವರು ಕವಿಗಳಾಗಿ, ಕಲಿಗಳಾಗಿ ನಿರ್ವಹಿಸಿದ ಪಾತ್ರ ಚಿರಸ್ಮರಣೀಯವಾಗಿದೆ.[15]

ಇದು ರಾಜ್ಯದ ಏಕೀಕೃತ ಸಂಘಟನೆಯಾಗಿ ಹೊರಹೊಮ್ಮಿದ ತಕ್ಷಣದಿಂದಲೇ ದೇಶದ ಪ್ರಜಾತಾಂತ್ರಿಕ ಸಂವಿಧಾನದ ಮಾದರಿಯಂತೆ ಇದರ ರಾಜ್ಯಸಮಿತಿಯ ಸದಸ್ಯರೆಲ್ಲರೂ ಸೇರಿ ತನ್ನ ಸಂಘಟನಾ ಶಕ್ತಿ ಮತ್ತು ಭದ್ರತೆಗೆ ಸಹಕಾರಿಯಾಗುವಂತೆ ತನ್ನದೇ ಆದ 'ಸಂವಿಧಾನ'ವನ್ನು ರಚಿಸಿಕೊಂಡರು.ಜೊತೆಗೆ ಸಂಘಟನೆಯ ಮುಖವಾಣಿಯಾಗಿ 'ಪಂಚಮ' ಪತ್ರಿಕೆಯನ್ನು ಪ್ರಾರಂಭಿಸಿದರು. ಹಾಗೆಯೇ ಲಾಂಛನವಾಗಿ ಧೈರ್ಯದ ಸಂಕೇತವಾದ 'ನೀಲಿಬಣ್ಣದ ಬಾವುಟ ಹಾಗೂ ಕಸಪೊರಕೆ ಮತ್ತು ಪಿಕಾಸಿ' ಗುರುತಿನ ಚಿಹ್ನೆಯನ್ನು ಅಳವಡಿಸಿಕೊಂಡರು. ಸಮಾಜದಲ್ಲಿ ಶತಶತಮಾನಗಳಿಂದ ಸಮಾಜದಲ್ಲಿ 'ಜಾತೀಯತೆಯ ಕೊಳಕು' ಕಸವಾಗಿ ಜಡ್ಡುಗಟ್ಟಿ ಕೆಟ್ಟವಾಸನೆಯಿಂದ ನಾರುತ್ತಿದ್ದುದನ್ನು ಸಂಘಟನೆಯ ಪಿಕಾಸಿಯಿಂದ ಅಗೆದು ಹೋರಾಟವೆಂಬ ಪೊರಕೆಯಿಂದ ಸ್ವಚ್ಛಗೊಳಿಸಿ ಸಮಾನತೆಯ ನಿರ್ಮಲ ಬದುಕನ್ನು ಕಟ್ಟಿಕೊಳ್ಳುವುದು ಈ ಲಾಂಛನದ ಸಂಕೇತವಾಗಿತ್ತು.[16]

ಹೀಗೆ ಕ.ದ.ಸಂ.ಸ. ಏಕೀಕೃತ ಸಂಘಟನೆಯಾಗಿ ರಾಜ್ಯದಾದ್ಯಂತ ದಲಿತರ ಮೇಲೆ ಯಜಮಾನಿಕೆ ಮಾಡಿಕೊಂಡು ಜಾತೀಯತೆಯ ಕ್ರೌರ್ಯವನ್ನು ಎಸಗುತ್ತಿದ್ದ ಮನುವಾದಿ ಸವರ್ಣೀಯರ ವಿರುದ್ಧ ಕ್ರಾಂತಿಯ ಠೇಂಕಾರವನ್ನು ಮೊಳಗಿಸಿತ್ತು. ಜೊತೆಗೆ ದೇವಸ್ಥಾನ, ಕೆರೆ–ಕಟ್ಟೆ, ಬಾವಿ, ಹೋಟೇಲ್, ಶಾಲೆಗಳು, ಸವರ್ಣೀಯರ ಬೀದಿ, ಮನೆಗಳಲ್ಲಿ ಪ್ರವೇಶ ನಿಷೇಧದ ಅಸ್ಪೃಶ್ಯತಾಚರಣೆ, ಜಾತಿಪದ್ಧತಿ, ಜೀತಗಾರಿಕೆ, ಮುಗ್ಧ ದಲಿತ ಹೆಣ್ಣು ಮಕ್ಕಳು ಹಾಗೂ ಹೆಂಗಸರುಗಳ ಮೇಲೆ ಅತ್ಯಾಚಾರ, ಲೈಂಗಿಕ ಕಿರುಕುಳ, ಮಾನಹರಣ, ಬೆತ್ತಲೆಸೇವೆ, ದೇವದಾಸಿ, ಬಸವಿ, ಓಕುಳಿಪದ್ಧತಿ, ದಲಿತರಿಗೆ ಮೂತ್ರ ಕುಡಿಸಿದ ಹಾಗೂ ಮಲ ತಿನ್ನಿಸಿದ ಪ್ರಕರಣಗಳು, ಹತ್ಯೆ ಪ್ರಕರಣಗಳು, ಕಗ್ಗೊಲೆಗಳು, ಸಜೀವ ದಹನ ಪ್ರಕರಣಗಳು, ಪ್ರಬಲ ಜಮೀನ್ದಾರರು, ಭೂಮಾಲೀಕರು, ಭೂಒಡೆಯರುಗಳ ದಬ್ಬಾಳಿಕೆಯಿಂದ ದಲಿತರ ಬಲವಂತ ದುಡಿಮೆ, ಅಕ್ರಮ ಭೂಆಕ್ರಮಣ, ವರ್ಗಸಂಘರ್ಷ, ಜಾತಿವೈಷಮ್ಯದ ಕೋಮುಘರ್ಷಣೆಗಳ ವಿರುದ್ಧ ಸಿಡಿಲಬ್ಬರದ ಚಳವಳಿಯನ್ನು ಕೈಗೊಂಡು ದಲಿತರನ್ನು ಇವುಗಳಿಂದ ಮುಕ್ತಿಗೊಳಿಸಲು ಪ್ರಯತ್ನಿಸುತ್ತಿದ್ದರು. ಜೊತೆಗೆ

ದಲಿತೇತರ ಮೇಲೆ ಅದೇ ವರ್ಗದ ದರ್ಪಿಷ್ಟ ದಬ್ಬಾಳಿಕೆಗಾರರ ಶೋಷಣೆಗಳ ವಿರುದ್ಧವೂ ಕೂಡ 'ಜಾತ್ಯತೀತ' ಮನೋಭಾವದಿಂದ ಹೋರಾಟ ಮಾಡುತ್ತಿದ್ದರು. ನೆರೆಹೊರೆಯ ರಾಜ್ಯಗಳಲ್ಲಿ (ಕಿಲ್ವನ್ಮಣಿ, ಬೆಲ್ಚಿ, ಪಿಫ್ರಾ, ಕರಂಚೇಡು, ಚುಂಡೂರು, ಕೆಸ್ತಾರ, ದೇವೋಲಿ, ರಾಯಪುರ, ಸಾಧುಪುರ, ಬಜಿತ್‌ಪುರ, ನಾಗಪಟ್ಟಣ, ಉದಯಪುರ, ಮುಜಾಫರ್‌ನಗರ ಇತ್ಯಾದಿ)ನ ದಲಿತ ಸಮುದಾಯಗಳ ಭೀಕರ ಹತ್ಯೆ, ನರಮೇಧ, ಹತ್ಯಾಕಾಂಡ, ಮಾರಣಹೋಮಗಳ ವಿರುದ್ಧ ಆಕ್ರೋಶಗೊಂಡು ತಮ್ಮ ರಕ್ತವನ್ನು ಬಾಟಲಿನಲ್ಲಿ ತುಂಬಿ ಕಳುಹಿಸುವ ಮೂಲಕ ದುರ್ಬಲ ಕೇಂದ್ರಸರ್ಕಾರ ಹಾಗೂ ಅಲ್ಲಿನ ರಾಜ್ಯಸರ್ಕಾರಗಳ ವಿರುದ್ಧ ಅಬ್ಬರಿಸಿದ್ದರು.[17] ಅಲ್ಲದೆ ಬಡವರ ಸಂಸಾರವನ್ನು ನಾಶಗೊಳಿಸುತ್ತಿದ್ದ ಹೆಂಡ, ಸಾರಾಯಿ ನಿಷೇಧಗೊಳಿಸುವ ಹಿನ್ನಲೆಯಲ್ಲಿ ಸರ್ಕಾರದ ಮುಖ್ಯಮಂತ್ರಿಗಳು, ಸಚಿವರು, ಶಾಸಕರುಗಳ ಬೇಜವಾಬ್ದಾರಿವಿರುದ್ಧ, ಎಲ್ಲಾ ಜಾತಿಗಳ ಬಡದಲಿತ ವಿದ್ಯಾರ್ಥಿಗಳಿಗೆ ವಸತಿ ಶಾಲೆ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಉತ್ತಮ ಶಿಕ್ಷಣವನ್ನು ಪಡೆಯಲು ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆಗಾಗಿ ಗೆರಾವು, ಮುಷ್ಕರ, ಪ್ರತಿಭಟನೆಗಳನ್ನು ಮಾಡುತ್ತಾ ಅವರಲ್ಲಿ ನಡುಕವನ್ನುಂಟು ಮಾಡಿದ್ದರು.[18]

ಹೀಗೆ ಇಡೀ ದೇಶದಾದ್ಯಂತ ಸವರ್ಣೀಯ ದಬ್ಬಾಳಿಕೆಗಾರರ ವಿರುದ್ಧ ಇನ್ನೊಬ್ಬರಿಗೆ ಮಾದರಿ ಎಂಬಂತೆ ಕಾರ್ಯನಿರ್ವಹಿಸುತ್ತಾ ಸಂಚಲನವನ್ನು ಉಂಟುಮಾಡಿದ್ದ ದಲಿತ್ ಪ್ಯಾಂಥರ್ಸ್ ಹಾಗೂ ಕ.ದ.ಸಂ.ಸ. ಸಂಘಟನೆಗಳು ಇದ್ದಕ್ಕಿದ್ದ ಹಾಗೆ ವಿಘಟನೆ ಎಂಬ ಬಿರುಗಾಳಿಗೆ ಸಿಕ್ಕಿ ಛಿದ್ರಗೊಂಡು ತಮ್ಮ ಶರವೇಗದ ಹೋರಾಟಗಳಿಗೆ ಚ್ಯುತಿ ತಂದುಕೊಂಡವು.

- **ದಲಿತ್ ಪ್ಯಾಂಥರ್ಸ್ ಹಾಗೂ ಕ.ದ.ಸಂ.ಸ.ಗಳ ಮೇಲೆ ಬೀಸಿದ ವಿಘಟನೆಯ ಬಿರುಗಾಳಿ:**

ಯಾವುದೇ ಸಂಘಟನೆಗಳು ತಾರತಮ್ಯರಹಿತ ಸಮಾಜವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ತಮ್ಮದೇ ಆದ ತತ್ವ, ಸಿದ್ಧಾಂತ, ವಿಚಾರಧಾರೆಗಳ ಅಡಿಯಲ್ಲಿ ರಾಜಕೀಯೇತರ ಸಂಘಟನೆಯಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ.ಇಂತಹ ಕಾರ್ಯಶೈಲಿಯನ್ನು ಅನುಸರಿಸಿದಾಗ ಈ ರೀತಿಯ ಸಂಘಟನೆಗಳ ಉಳಿವು ಚಿರಸ್ಥಾಯಿಯಾಗಿರುತ್ತದೆ. ಇದನ್ನು ಮರೆತು ವಿದ್ವಾಂಸರು, ಸಾಮಾಜಿಕ ಚಿಂತಕರು, ರಾಜಕೀಯ ತಜ್ಞರುಗಳು, ಲೇಖಕರುಗಳ ಅಭಿಪ್ರಾಯದಂತೆ ರಾಜಕೀಯವೆಂಬ 'ಮೋಹಿನಿ ಬಸ್ಮಾಸುರ'ನಿಗೆ ಈ ರೀತಿಯ ಜನಪರ ಸಂಘಟನೆಗಳು ಮರುಳಾಗಿ ತಮ್ಮ ಸಂಘಟನೆಗಳನ್ನು ಇದರ ವ್ಯಾಮೋಹಕ್ಕೊಳಗಾಗುವಂತೆ ಮಾಡಿದರೆ ಇಂತಹ ಸಂಘಟನೆಗಳ ಅಸ್ತಿತ್ವ ಅಲ್ಪಾಯುಷ್ಯವಾಗಿ ಸರ್ವಪತನದತ್ತ ದಾಪುಗಾಲಿಡುವಲ್ಲಿ ಸಂದೇಹವೇ ಉದ್ಭವಿಸುವುದಿಲ್ಲ. ಆದರೆ ದಲಿತಪರ ಸೇವೆಯೇ ಸಂಘಟನೆಯ ಧ್ಯೇಯವಾಗಿಸಿಕೊಂಡಿದ್ದ ದಲಿತ್ ಪ್ಯಾಂಥರ್ಸ್ ಹಾಗೂ ಕ.ದ.ಸಂ.ಸ. ಸಂಘಟನೆಗಳೆರಡೂ ಕೂಡ ತಮ್ಮ ಸ್ವಾರ್ಥರಹಿತವಾದ ಹೋರಾಟದ ದಿಕ್ಕನ್ನೇ ಬದಲಿಸಿ ಪ್ರತಿಯೊಬ್ಬರ ಕಲ್ಪನೆ ಮತ್ತು ಊಹೆಗಳೇ

ಸುಳ್ಳಾಗುವಂತೆ ಸ್ವಾರ್ಥಸಹಿತವಾದ ಆಸೆಆಮಿಷಗಳಿಗೆ ಬಲಿಯಾಗಿ ದಲಿತ ಚಳವಳಿಯನ್ನು ಹಾದಿ ತಪ್ಪಿಸಿದವು.ಇವುಗಳು ಬ್ಲಾಕ್ ಪ್ಯಾಂಥರ್ಸ್‌ನ ಹೋರಾಟದ ವಿಧಾನಗಳನ್ನು ಅನುಸರಿಸಿದಂತೆ ಛಿದ್ರತೆಯಲ್ಲೂ ಇದರ ಜಾಡನ್ನೇ ಅನುಸರಿಸಿದವು.ಇದರಿಂದಾಗಿಇವುಗಳ ಸಂಘಟನಾತ್ಮಕ ಸಾಂಸ್ಥಿಕತೆ 'ವಿಘಟನೆ' ಎಂಬ ಚಂಡಮಾರುತದ ಭಯಂಕರ ಬಿರುಗಾಳಿಗೆ ಸಿಲುಕಿ ವಿವಿಧ ಬಣಗಳಾಗಿ ಚದುರಿಹೋದವು.ಇದಕ್ಕೆ ಪ್ರಮುಖವಾದ ಕಾರಣಗಳನ್ನು ಕೆಳಗಿನಂತೆ ತಿಳಿದುಕೊಳ್ಳಬಹುದು.

ದಲಿತ್ ಪ್ಯಾಂಥರ್ಸ್ ಸಂಘಟನೆಯ ಛಿದ್ರತೆಗೆ ಪ್ರಮುಖ ಕಾರಣಗಳೆಂದರೆ,

1. ರಾಜಾಢಾಲೆ ಮತ್ತು ನಾಮದೇವ ಢಸಾಳರವರು ಹಣ, ಆಸ್ತಿ, ಅಧಿಕಾರದ ಆಸೆ, ಆಮಿಷಗಳಿಗೆ ಒಳಗಾಗಿ ಗೆದ್ದ ರಾಜಕೀಯ ಪಕ್ಷಗಳ ಬಾಲ ಹಿಡಿದದ್ದು.
2. ಸೈದ್ಧಾಂತಿಕ ವಿಚಾರವಾಧರಿತ ಭಿನ್ನಾಭಿಪ್ರಾಯಗಳು, (ಢಾಲೆ ಬೌದ್ಧವಾದ, ಢಸಾಳ ಮಾರ್ಕ್ಸಿಸ್ಟ್).
3. ನಾಜೂಕಾದ ಬೌದ್ಧಿಕ ಬೆಳವಣಿಗೆಗಾಗಿ ಸಂಘಟನೆಯ ಕಾರ್ಯಕರ್ತರು, ಪದಾಧಿಕಾರಿಗಳಿಗೆ ತರಬೇತಿ ಅಧ್ಯಯನ ಶಿಬಿರಗಳನ್ನು ದಲಿತ ಪ್ಯಾಂಥರ್ಸ್ ಸಂಘಟನೆ ಏರ್ಪಡಿಸದೆ ಹೋದುದು.
4. ಅಪರಿಪಕ್ವವಾದ ನಾಯಕತ್ವದ ಗೀಳುತನ.
5. ಸಂಘಟನೆಯ ನೀತಿ ನಿಯಮಗಳನ್ನು ಸದಸ್ಯರು ಸರಿಯಾಗಿ ಅನುಸರಿಸದೆ ಹೋದದ್ದು.
6. ದಲಿತ ಹಾಗೂ ದಲಿತೇತರ ಬುದ್ಧಿಜೀವಿಗಳ ನಡುವೆ ಉದ್ಭವಿಸಿದ್ದ ಸಾಹಿತ್ಯಿಕ ಭಿನ್ನಾಭಿಪ್ರಾಯಗಳು.
7. ವಾಸ್ತವ ನೆಲೆಯ ವ್ಯಾವಹಾರಿಕತೆಯ ಕೊರತೆ.
8. ಸಂಘಟನೆಯ ಹಣಕಾಸು ನಿರ್ವಹಣೆಯಲ್ಲಿ ಪಕ್ವತೆಯ ಕೊರತೆ.
9. ಗ್ರಾಮೀಣ ದಲಿತ ಜನಾಂಗಗಳ ಕಷ್ಟ ಸುಖಗಳಿಗೆ ಸ್ಪಂಧಿಸದೆ ಅವರನ್ನು ಕಡೆಗಣಿಸಿದ್ದು.
10. ಯಾವುದೇ ರೀತಿಯ ತೀರ್ಮಾನಗಳನ್ನು ಕೈಗೊಳ್ಳುವುದರಲ್ಲಿ ಚಾಲುಕುತನ ಇಲ್ಲದಿದ್ದುದು.
11. ಸಂಘಟನೆಯ ನಾಯಕರಲ್ಲಿ ರಾಜಕೀಯ ನಿರ್ಧಾರ ತೆಗೆದುಕೊಳ್ಳುವಲ್ಲಿ ಅಪರಿಪೂರ್ಣ ಪರಿಪಕ್ವ ಜ್ಞಾನದ ಕೊರತೆ ಪ್ರತಿಫಲಿಸುತ್ತಿದ್ದುದು, ಮುಂತಾದವುಗಳು ಪ್ರಮುಖವಾದವುಗಳು.[19]

ಇದಕ್ಕೆ ಸಮನ್ವತೆಯ ಪ್ರತಿಬಿಂಬ ಎಂಬಂತೆ ದಲಿತ್ ಪ್ಯಾಂಥರ್ಸ್ ದುಡುಕಿ ದಂಡತೆತ್ತಂತೆ ಕ.ದ.ಸಂ.ಸ.ವೂ ಕೂಡ ವಿಘಟನೆಗೆ ಸಿಲುಕಿ ತನ್ನ ಏಕೀಕೃತ ಸಂಘಟನಾ ಶಕ್ತಿಯನ್ನು ನಿಸ್ತೇಜಗೊಳಿಸಿಕೊಂಡಿತು.ಇದಕ್ಕೆ ಕೆಳಕಂಡ ಕಾರಣಗಳನ್ನು ನೀಡಬಹುದು.

1. ವ್ಯಕ್ತಿಗತ ಪ್ರತಿಷ್ಠೆ ಆಧಾರಿತ ಭಿನ್ನತೆಗಳು
2. ಸೈದ್ಧಾಂತಿಕವಾಗಿ ಜನ್ಮ ತಾಳಿದ ವಾದವಿವಾದಗಳು

*Indian Journal of History and Archaeology*
*ISSN (E):2582-225X,* VOL-1 ISSUE 5, JAN-FEB, 2020, 06-19

3. ರಾಜಕೀಯ ಪ್ರವೇಶಿಸುವಿಕೆಗೆ ಸಂಬಂಧಿಸಿದಂತೆ ಸತ್ವಯುತವಾದ ತೀರ್ಮಾನ ತೆಗೆದುಕೊಳ್ಳುವುದರಲ್ಲಿ ವಿಫಲತೆ.
4. ಕಾರ್ಯಕ್ರಮಗಳ ಸಮಯ ಪಾಲನೆಯಲ್ಲಿ ಆಶಿಸ್ತು.
5. ಹಣಕಾಸು ನಿರ್ವಹಣೆಯಲ್ಲಾದ ಭ್ರಷ್ಟತೆ.
6. ರಾಜಕೀಯ ಪಕ್ಷಗಳು ತೋರಿದ ನಿಗಮ, ಮಂಡಳ, ಸಂಘ ಸಂಸ್ಥೆಗಳ ಅಧ್ಯಕ್ಷಗಿರಿ ಆಸೆಗೆ ಮರುಳಾಗಿ ಹೋದುದು.
7. ಉಪಜಾತಿಗಳ ಸ್ಥಾನಮಾನಗಳಗೆ ಕುರಿತಾಗಿ ಉದ್ಭವಿಸಿದ ಸಮಸ್ಯೆಗಳನ್ನು ಕೂತು ಚರ್ಚಿಸದೆ ವಿಫಲಗೊಂಡಿದ್ದು.
8. ಸಂಘಟನೆಯ ನಾಯಕರ ಸರ್ವಾಧಿಕಾರತನದ ಧೋರಣೆ ಮುಂತಾದವುಗಳು ಪ್ರಮುಖವಾದವುಗಳು. ಈ ಕಾರಣಗಳ ಹಿನ್ನಲೆಯಲ್ಲಿ ಕ.ದ.ಸಂ.ಸ. ಏಳು ಬಾರಿ ವಿವಿಧ ಹಂತಗಳಲ್ಲಿ ಛಿದ್ರಛಿದ್ರವಾಗಿ ನಲುಗಿ ಹೋಯಿತು.[೨೦]

ಮೇಲ್ಕಾಣಿಸಿದ ವಿವರಗಳು ಇವೆರಡೂ ಸಂಘಟನೆಗಳ ಏಳುಬೀಳುಗಳನ್ನು ಆಧಾರಗಳ ಮೂಲಕ ಪ್ರತಿಬಿಂಬಿಸುತ್ತವೆ ಎಂದು ನಿಖರವಾಗಿ ಹೇಳಬಹುದು.

- **ಉಪಸಂಹಾರ:**

ಯಾವುದೇ ಸಂಘಟನೆ, ಸಂಸ್ಥೆ, ಒಕ್ಕೂಟ, ಸಂಘ, ಸಮಿತಿಗಳಾಗಲಿ ಅವುಗಳು ಒಂದು ಕುಟುಂಬವಾದರೆ, ಅವುಗಳ ಜೊತೆಜೊತೆಯಲ್ಲಿಯೇ ಕಾರ್ಯನಿರ್ವಹಿಸುವ ಯಾರೇ ಆಗಲಿ ಇವುಗಳ ಸದಸ್ಯರು ಮತ್ತು ಈ ಏಕೀಕೃತ ಸಂಘಟನೆಗಳನ್ನು ಪ್ರತಿನಿಧಿಸುವ ಪ್ರತಿನಿಧಿಗಳಾಗಿರುತ್ತಾರೆ.ಇವರುಗಳು ಅನ್ಯಾಯಗಳ ವಿರುದ್ಧದ ತಮ್ಮ ಹೋರಾಟದ ಬಲವನ್ನು ತಮ್ಮಗಳ ಸಾಂಸ್ಥಿಕ ಶಕ್ತಿಯಿಂದ ಫಲಪ್ರದವಾಗಿ ವೃದ್ಧಿಸಿಕೊಂಡು ಶೋಷಿತ ಸಮುದಾಯಗಳ ಜೀವನಾಡಿಗಳಾಗಿ ಕಾರ್ಯನಿರ್ವಹಿಸಬೇಕಾಗಿರುವುದು ಪರಮಾಧ್ಯ ಕರ್ತವ್ಯವಾಗಿರುತ್ತದೆ.ಜೊತೆಗೆ ತಮ್ಮ ಜನಪರ ಸಂಘಟನೆಗಳನ್ನು ರಾಜಕೀಯೇತರವಾಗಿ ಗುರುತಿಸಿಕೊಂಡು ಅವಕಾಶವಾದಿಗಳು, ಸಮಯಸಾಧಕರು, ಭ್ರಷ್ಟರೂ ಆದ ರಾಜಕಾರಣಿಗಳ ಸೊಗಲಾಡಿತನಕ್ಕೆ ಮರುಳಾಗದೆ ಸಂಘದ ತತ್ವ, ಸಿದ್ಧಾಂತ, ಪ್ರಣಾಳಿಕೆಗಳ ಜಾರಿಗೆ ಸಿದ್ಧಹಸ್ತರಾಗಬೇಕಾಗುತ್ತದೆ. ಆದರೆ ಇವರುಗಳು ಕುತಂತ್ರ ರಾಜಕಾರಣಿಗಳ ಒಡೆದು ಆಳುವ ನೀತಿಗೆ ಸಂಘಟನೆಯ ಹೆಸರಿನಲ್ಲಿ ಅಲ್ಪಾಯುಷ್ಯವಾದ ವೈಯಕ್ತಿಕ ಲಾಭ, ಪ್ರತಿಷ್ಠೆ, ಅಧಿಕಾರ ವ್ಯಾಮೋಹ, ಲಾಲಸೆಗಳಗೆ ಆಸೆಪಟ್ಟರೆ ಮುಂದಾಗುವ ಅವಘಡಗಳಗೆ ದಂಡತೆತ್ತಬೇಕಾಗುತ್ತದೆ.ಇದಕ್ಕೆ ಸ್ಪಷ್ಟ ನಿದರ್ಶನವೇ

ದಲಿತ್ ಪ್ಯಾಂಥರ್ಸ್ ಹಾಗೂ ಕ.ದ.ಸಂ.ಸ. ಇಂದು ಇವುಗಳು ಅಂದು ಕ್ಷಣಿಕ ಆಸೆಗಳಿಗೆ ಬಲಿಯಾಗಿ ತಮ್ಮ ಏಕೀಕೃತ ಸಂಘಟನೆಗಳಿಗೆ ಸ್ಪಷ್ಟ ರೂಪವೇ ಇಲ್ಲದಂತೆ ಮಾಡಿಕೊಂಡು ಸಮಾಜದ ಮುಖ್ಯವಾಹಿನಿಯಿಂದ ಬಣಗಳಾಗಿ ಚದುರಿಹೋಗಿರುವುದು ನಿಜಕ್ಕೂ ದುರಂತ.

- **ಕೊನೆಟಿಪ್ಪಣಿಗಳು:**

1.www.black panther Wikipedia, The free encyclopedia.
2.Lata Murugkar, Dalit Panther Movement, Bombay Popular Prakashan, 1991, Pp192.
3.www.black panther Wikipedia, The free encyclopedia.
4.Marine Gene, The Black Panthers, Signet, New American Library, 1969, Pp56.
5.Lata Murugkar, Dalit Panther Movement, Bombay Popular Prakashan, 1991, Pp191.
6.Manifesto of Black Panther Part, in Negro Almanac, Bicentennial edition 1976, Pp134-135.
7.ಜಗನ್ನಾಥ್ ಸಿಂಧೆ, ದಲಿತ ಚಿಂತಕ ಬಿ.ಶ್ಯಾಮಸುಂದರ್, ೨೦೦೦೫, ಪುಟ೮.
8.Lata Murugkar, Dalit Panther Movement, Bombay Popular Prakashan, 1991, Pp43.
9.ಎಂ.ಎಸ್. ಶೇಖರ್, ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಸಾಹಿತಿಗಳು, ೨೦೦೬, ಪುಟ೮೩.
10. ಅದೇ......, ಪುಟ೮೦–೮೪, ೭೭.
11. Lata Murugkar, Dalit Panther Movement, Bombay Popular Prakashan, 1991, Pp84,77.
12. Ibid.........., Pp56.
13. Ibid…….Pp64.

14. ದೇವನೂರು ಮಹಾದೇವ (ಮಾಜಿ ರಾಜ್ಯ ಸಂಚಾಲಕರು, ಕ.ದ.ಸಂ.ಸ. ಹಾಗೂ ದಲಿತಪರ ಕವಿಗಳು ಮತ್ತು ಹೋರಾಟಗಾರರು, ಮೈಸೂರು) ರವರ ಸಂದರ್ಶನ, ಶನಿವಾರ, 8 ಜನವರಿ, 2011.
15. ಅರವಿಂದ ಮಾಲಗತ್ತಿ (ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು) ರವರ ಸಂದರ್ಶನ, ಮಂಗಳವಾರ, 12 ಅಕ್ಟೋಬರ್, 2010.
16. ಹೆಚ್. ಗೋವಿಂದಯ್ಯ (ನಿವೃತ್ತ ಪ್ರಾಧ್ಯಾಪಕರು ಹಾಗೂ ಕ.ದ.ಸಂ.ಸ. ಹೋರಾಟಗಾರರು ಮತ್ತು ಕವಿಗಳು, ಪಂಚಮ ಪತ್ರಿಕೆಯ ಸಂಪಾದಕರು, ಮೈಸೂರು) ರವರ ಸಂದರ್ಶನ, ಭಾನುವಾರ, 2 ಜನವರಿ, 2011.
17. ಎಸ್. ಗಣೇಶನ್, ದಲಿತರ ಮೇಲಿನ ದೌರ್ಜನ್ಯಗಳು, 1981, ಪುಟ7–11.
18. ಗುರುಪ್ರಸಾದ್ ಕೆರಗೋಡು (ಕ.ದ.ಸಂ.ಸ. ರಾಜ್ಯ ಸಂಚಾಲಕರು, ಮಂಡ್ಯ) ರವರ ಸಂದರ್ಶನ, ಭಾನುವಾರ, 19 ಡಿಸೆಂಬರ್, 2010.
19. Lata Murugkar, Dalit Panther Movement, Bombay Popular Prakashan, 1991, Pp 97-102.
20. ಕ.ದ.ಸಂ.ಸ.ದಲ್ಲಿ ಹೋರಾಟಗಾರರಾಗಿ ಸೇವೆ ಸಲ್ಲಿಸಿದ ಮುಂದಾಳುಗಳ ಸಂದರ್ಶನ.